ತಿಂದುಂಡ ಮನೆಯಿಂದ ಹೊರಕ್ಕೆ ಹೋಗುವುದಕ್ಕೆ ಅವನ ಹೆಜ್ಜೆಗಳು ಅವನಿಗೆ ಭಾರವಾದಂತೆ ಅನ್ನಿಸಿತು. ಹೆಚ್ಚು ಕಡಿಮೆ ಉಣುಗೋಲವರೆಗೆ ಹೋಗಿದ್ದಿರಬೇಕು. ಹೆಗಡೆಯವರಿಗೆ ಮತ್ತೇನೋ ಹೇಳಬೇಕೆಂದು ತಿರುಗಿ ಬಾಗಿಲು ಹತ್ತಿರ ಬಂದು, 'ಹೆಗಡೆಯವರೇ' ಎಂದು ಎರಡೆರಡು ಬಾರಿ ಕರೆದರೂ ಹೆಗಡೆಯವರು ಮಾತ್ರ ಹೊರಕ್ಕೆ ಬಾರದಿರುವುದು ಅವಮಾನವಾದಂತೆ ಅನ್ನಿಸಿತ್ತು.

ಆ ದಿನ ಬೊಮ್ಮ ತಾನು ಹಾಗೆ ಮಾತನಾಡಬಾರದಿತ್ತು ಎಂದು ನಾಲ್ಕಾರು ಬಾರಿಯಾದರೂ ಅಂದುಕೊಂಡಿದ್ದ. ಮನಸ್ಸು ಸಿಕ್ಕಾಗಿ ಬೇಗುದಿಯಾದಾಗೆಲ್ಲ ಎಣ್ಣೆ ಅಂಗಡಿ ಪರಿಹಾರಕೊಡುತ್ತದೆ ಎಂದು ನಂಬಿದ್ದ ಆತ ನೇರವಾಗಿ ಶೆಟ್ಟರ ಅಂಗಡಿಗೆ ಹೋಗಿ ತನ್ನಲ್ಲಿದ್ದ ಹಣದಲ್ಲಿ ತಾನು ಕಂಠಪೂರ್ತಿ ಕುಡಿದು, ತನ್ನ ಸ್ನೇಹಿತರಿಗೂ ಕುಡಿಸಿದ್ದ. ಎಲ್ಲರೂ ಬಂದು ಊರಿನ ಮೋರಿ ಕಟ್ಟೆಯ ಮೇಲೆ ಕುಳಿತು ಹೆಗಡೆಯವರು ಮಾಡಿದ್ದು ತಪ್ಪು ಎಂದು ಹೇಳಿ ಬೊಮ್ಮನನ್ನು ಸಮಾಧಾನಿಸುವ ಪ್ರಯತ್ನವನ್ನು ಮಾಡಿದರು. ಎಷ್ಟೋ ಹೊತ್ತಿನವರೆಗೆ ಮಾತುಕತೆಗಳೆಲ್ಲ ಮುಗಿದ ಮೇಲೆ ಮನೆ ಕಡೆಗೆ ಹೊರಟುಬಂದಿದ್ದರು.

ಕುಡಿದಿದ್ದರ ಪರಿಣಾಮವೆಂಬಂತೆ ಆ ದಿನ ಬೊಮ್ಮನಿಗೆ ಚೆನ್ನಾಗಿಯೇ ನಿದ್ದೆ ಹತ್ತಿತ್ತು. ಮರು ದಿವಸ ಬೆಳಗಾದಂತೆ ಬೊಮ್ಮನು ವಾಸ್ತವಕ್ಕೆ ಬಂದಾಗ ಇವತ್ತು ಏನು ಮಾಡಬೇಕೆಂದು ತಿಳಿಯಲಿಲ್ಲ. ಎಷ್ಟೋ ವರುಷದಿಂದ ಬೆಳಗ್ಗೆ ಎದ್ದರೆ ನಮ್ಮ ಹೆಗಡೆಯವರ ಮನೆಯಲ್ಲಿ ಕೆಲಸವೆಂದು ಓಡಿಹೋಗುತ್ತಿದ್ದ ಬೊಮ್ಮನಿಗೆ, ತಾನು ಒಂದು ದಿನ ಹೀಗೆ ಅಲ್ಲಿಂದ ಈ ರೀತಿಯಲ್ಲಿ ಹೊರಬರುವೆನೆಂದು ಅಂದುಕೊಂಡಿರಲಿಲ್ಲ. ಅದು ಕೂಲಿ ಮಾಡಿ, ಹಣ ಪಡೆಯುವುದು ಮಾತ್ರವೇ ಆಗಿರಲಿಲ್ಲ. ತನ್ನಪ್ಪನ ಕಾಲದಿಂದಲೂ ಆ ಮನೆಗಾಗಿ ನಿಯತ್ತಾಗಿ ಕೆಲಸ ಮಾಡಿದ್ದು ನೆನಪಾದಾಗ ದುಃಖ ಇನ್ನಿಲ್ಲದೇ ಒತ್ತರಿಸಿ ಬಂದಿತ್ತು. ಹೆಂಡತಿ ಕಲ್ಲಮ್ಮನಿಗೆ ನಡೆದ ವಿಚಾರವನ್ನು ತಿಳಿಸಿದಾಗ ಅವಳು ಮರುಗಿದಳು. ಬೊಮ್ಮನಿಗೆ ಹಾಗೆ ಹೇಳಬಾರದಿತ್ತು ಎಂದು ಬೈದಳು. ಕಷ್ಟ ಎಂದು ಅಂದುಕೊಂಡಾಗೆಲ್ಲ ನೆನಪಾಗುವ ಹೆಗಡೆಯವರ ಮನೆಯನ್ನು ಒಂದು ಮಾತಿಗಾಗಿ ಮರೆಯುವುದು ಅವಳಿಂದ ಸಾಧ್ಯವಿರಲಿಲ್ಲ. ಹೋಗಿ ಮತ್ತೊಮ್ಮೆ ಹೆಗಡೆಯವರ ಕೈಕಾಲನ್ನು ಹಿಡಿದು ತನ್ನದು ತಪ್ಪಾಯಿತೆಂದು ಬೇಡುವಂತೆ ಹೇಳಿದಳು. ಸ್ವಾಭಿಮಾನಿ ಬೊಮ್ಮ ಹಠಕ್ಕೆ ಬಿದ್ದವರಂತೆ ಅವರಿಗೆ ಸ್ವತಂತ್ರವಾಗಿ ಬದುಕಿ ತೋರಿಸುವೆ ಎನ್ನುತ್ತ ಗಟ್ಟಿಯಾಗಿ ಕುಳಿತಿದ್ದ.

ಮುಂದೇನು ಮಾಡಬೇಕೆಂದು ಬೊಮ್ಮನಿಗೆ ಸ್ಪಷ್ಟತೆ ಇದ್ದಂತಿತ್ತು. ಅವನ ಮನೆಯ ಸುತ್ತ ಸರ್ಕಾರಿ ಜಾಗವಾಗಿದ್ದರೂ ಅದು ಅವನ ಸುಪರ್ದಿಯಲ್ಲಿಯೇ ಇದ್ದಿತ್ತು. ಆ ಜಾಗವನ್ನು ಸಮತಟ್ಟು ಮಾಡಿ, ಅಡಿಕೆ ತೋಟ ಮಾಡಬೇಕೆಂದು ಹಲವು ವರುಷಗಳಿಂದ ಅಂದುಕೊಂಡಿದ್ದ. ಆದರೆ ತನಗೇಕೆ ತೋಟ ಪಾಟ ಎಂಬ ಅನಾದರ ಅವನನ್ನು ಹಾಗೇ ಕುಳ್ಳಿರಿಸಿತ್ತು. ಈಗ ಹೆಗಡೆಯವರ ಪ್ರಕರಣದ ನಂತರ ತಾನು ಏನಾದರೂ ಮಾಡಬೇಕೆಂದು ಬಲವಾಗಿ ಅನ್ನಿಸತೊಡಗಿತ್ತು. ಹಗಲಿನಲ್ಲಿ ಎಲ್ಲಿಯಾದರೂ ಕೂಲಿಯನ್ನು ಮಾಡುತ್ತಿದ್ದ. ಸಂಜೆ ಮನೆಗೆ ಬಂದವನು ಒಂದಷ್ಟು ಹೊತ್ತು ಗಂಡ ಹೆಂಡತಿ ಸೇರಿ ಮನೆಯ ಎದುರಿನ ಜಾಗವನ್ನು ಮಟ್ಟ ಮಾಡುತ್ತಿದ್ದರು. ಕೆಲವೇ ಕೆಲವು ದಿನಗಳಲ್ಲಿ ಅಂದುಕೊಂಡಂತೆ ಆದಾಗ, ಅಲ್ಲಿ ಒಂದಷ್ಟು ಬಾಳೆ ಗಿಡಗಳನ್ನು ತಂದು ನೆಟ್ಟರು. ಕಲ್ಲಮ್ಮ ಬಾವಿಯಿಂದ ದಿನಾಲೂ ನೀರನ್ನು ಹಾಕಿ ಮೂರು ನಾಲ್ಕು ತಿಂಗಳು ಆರೈಕೆ ಮಾಡಿದಳು. ಗಣೇಶ ಚೌತಿ ಮುಗಿಯುತ್ತಿದ್ದಂತೆ ಯಾರಿಂದಲೋ ಕಾಡಿ ಬೇಡಿ ಬೊಮ್ಮ ಅಡಿಕೆ ಗಿಡವೊಂದಕ್ಕೆ ಇಪ್ಪತ್ತು ರೂಪಾಯಿ ಕೊಟ್ಟು ನೆಟ್ಟಿದ್ದ. ನಾಲ್ಕೈದು ತಿಂಗಳಿನಲ್ಲಿ ಹೊಸ ಚಿಗುರನ್ನು ಕೊಟ್ಟಾಗ ಅವರ ಖುಷಿ ಹೇಳತೀರದಾಗಿತ್ತು. ತನ್ನ ಕಣ್ಣೆ ಬೀಳಬಾರದು ಎಂದು ನಿಂಬೆ ಹಣ್ಣು ಮೆಣಸಿನಕಾಯಿಯನ್ನು ತೋಟದ ಬೇಲಿಗೆ ಕಟ್ಟಿದ್ದ. ತನ್ಮಧ್ಯೆ ಹೆಗಡೆಯವರು ಬೊಮ್ಮನನ್ನು ತಮ್ಮ ಮನೆಗೆ ಬಂದುಹೋಗುವಂತೆ ಯಾರಲ್ಲೋ ಹೇಳಿ ಕಳುಹಿಸಿದ್ದರೂ ಅವನು ಮಾತ್ರ ಏನೂ ಹೋಗಿರಲಿಲ್ಲ.

ಬದುಕು ವಿಸ್ತಾರಗೊಂಡಂತೆ ಸಮಸ್ಯೆಗಳು ಸಾವಿರವಂತೆ. ಈ ಮಾತು ಬೊಮ್ಮನಿಗೂ ಅನ್ವಯಿಸುವಂತಿತ್ತು. ಅವನ ತೋಟ ಮಾಡಿದ ಖುಷಿ ಹೆಚ್ಚುದಿನ ಬಾಳಲಿಲ್ಲ. ನೆಟ್ಟಿದ್ದ ಅಡಕೆ, ಬಾಳೆ ಗಿಡಗಳಿಗೆ ಒಂದೊಂದೇ ಕಾಟ ಪ್ರಾರಂಭವಾಗಿತ್ತು. ಮೊದಲು ಬಾಳೆಗಿಡಗಳಿಗೆ ಕಟ್ಟೆರೋಗ ಬಂದು ಒಂದಷ್ಟು ಗಿಡಗಳು ನಾಶವಾದವು. ಶೆಟ್ಟರ ಅಂಗಡಿಯಿಂದ ಮದ್ದನ್ನು